# ಸಮಾಸಗಳು

ಎರಡು ಅಥವಾ ಅನೇಕ ಪದಗಳು ಅರ್ಥಕ್ಕೆ ಅನುಸಾರವಾಗಿ ಸೇರಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯವು ಲೋಪವಾಗಿ ಒಂದು ಪದವಾಗುವುದಕ್ಕೆ ಸಮಾಸವೆನ್ನುತ್ತಾರೆ.

ಸಮಾಸದಲ್ಲಿ ಬರುವ ಮೊದಲನೆಯ ಪದಕ್ಕೆ **ಪೂರ್ವಪದ** ಹಾಗೂ ಎರಡನೆಯ ಪದಕ್ಕೆ **ಉತ್ತರಪದ** ಎಂದು ಕರೆಯುತ್ತಾರೆ. ಸಮಾಸವನ್ನು ಬಿಡಿಸಿ ಬರೆಯುವುದಕ್ಕೆ ವಿಗ್ರಹ ವಾಕ್ಯವೆಂದು ಹೆಸರು.

ಉದಾಹರಣೆ: ವಿಗ್ರಹ ವಾಕ್ಯ

ಸಮಾಸ = ಪೂರ್ವಪದ + ಉತ್ತರಪದ

ಕಾಲುಬಳೆ = ಕಾಲಿನ + ಬಳೆ

ದೇವಾಲಯ = ದೇವರ + ಆಲಯ

ಮರಗಾಲು = ಮರದ + ಕಾಲು

ಹೆಜ್ಜೇನು = ಹಿರಿದು + ಜೇನು

ಮುಂಗೈ = ಕೈಯ + ಮುಂದು

ಚಕ್ರಪಾಣಿ = ಚಕ್ರವು + ಪಾಣಿಯಲ್ಲಿ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಸಮಾಸದ ವಿಧಗಳು**

ಕೆಲವು ಸಮಾಸಗಳಲ್ಲಿ **ಪೂರ್ವಪದದ ಅರ್ಥವೂ** ಮುಖ್ಯವಾಗಿದ್ದರೆ ಇನ್ನು ಕೆಲವು ಸಮಾಸಗಳಲ್ಲಿ **ಉತ್ತರ ಪದದ ಅರ್ಥವು** ಮುಖ್ಯವಾಗಿರುತ್ತದೆ. ಎರಡು ಪದಗಳ ಅರ್ಥವು ಮುಖ್ಯವಾಗಿರುವ ಸಮಾಸಗಳು ಇವೆ.




FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಉತ್ತರ ಪದಾರ್ಥಪ್ರಧಾನ ಸಮಾಸಗಳು** – ತತ್ಪುರುಷ, ಕರ್ಮಧಾರೆಯ, ದ್ವಿಗು, ಗಮಕ

**ಪೂರ್ವ ಪಧಾರ್ಥಪ್ರಧಾನ ಸಮಾಸಗಳು** – ಅಂಶಿ, ಕ್ರಿಯಾ

**ಉಭಯ ಪದಾರ್ಥಪ್ರಧಾನ ಸಮಾಸ** – ದ್ವಂದ್ವ

**ಅನ್ಯ ಪದಾರ್ಥಪ್ರಧಾನ ಸಮಾಸ** - ಬಹುವ್ರೀಹಿ

## ಉತ್ತರ ಪದಾರ್ಥಪ್ರಧಾನ ಸಮಾಸಗಳು

**ದ್ವಿಗು** - ಸಂಖ್ಯಾ ವಾಚಕವು ನಾಮಪದದೊಂದಿಗೆ ಸೇರಿ ಆಗುವ ಸಮಾಸವೇ ದ್ವಿಗು. ಸಮಾಸ ಇಲ್ಲಿ ಉತ್ತರ ಪದದ ಅರ್ಥವೇ ಮುಖ್ಯ.

ಎರಡು + ಕೆಲ = ಇಕ್ಕೆಲ / ಇರ್ಕೆಲ

ಮೂರು + ಮಡಿ = ಮುಮ್ಮಡಿ

ಒಂದು + ಕಟ್ಟು = ಒಗ್ಗಟ್ಟು

**ಗಮಕ ಸಮಾಸ** - ಗಮಕ ಸಮಾಸದಲ್ಲಿ ಸರ್ವನಾಮ ಅಥವಾ ಕೃದಂತಗಳು ನಾಮಪದದೊಡನೆ ಸೇರುತ್ತದೆ. ಇಲ್ಲಿ ಉತ್ತರ ಪದದ ಅರ್ಥ ಮುಖ್ಯ.

ಅವನು + ಹುಡುಗ = ಆ ಹುಡುಗ

ಇವಳು + ಹೆಂಗಸು = ಈ ಹೆಂಗಸು

ಇದು + ನಾಯಿ = ಈ ನಾಯಿ

ಮಾಡಿದ್ದು + ಅಡುಗೆ = ಮಾಡಿದ ಅಡುಗೆ

**ತತ್ಪುರುಷ ಸಮಾಸ** = ಎರಡು ನಾಮಪದಗಳು ಸೇರಿ ಆಗುವದು ತತ್ಪುರುಷ ಸಮಾಸ. ಇಲ್ಲಿ ಉತ್ತರ ಪದದ ಅರ್ಥ ಮುಖ್ಯ.

ಅರಸನ + ಮನೆ = ಅರಮನೆ

ಕಾಲಿನ + ಬಳೆ = ಕಾಲುಬಳೆ

ಕಣ್ಣಿನಿಂದ + ಕುರುಡ = ಕಣ್ಣುಗುರುಡ

ತೇರಿಗೆ + ಮರ = ತೇರುಮರ

ಸಂಜೆಯ + ಕೆಂಪು = ಸಂಜೆಗೆಂಪು

ಬೆಟ್ಟದ + ತಾವರೆ = ಬೆಟ್ಟದಾವರೆ

**ಕರ್ಮಧಾರಯ ಸಮಾಸ** – ವಿಶೇಷಣ ಮತ್ತು ನಾಮಪದಗಳು ಸೇರಿ ಆಗುವ ಸಮಾಸ. ಉತ್ತರ ಪದದ ಅರ್ಥ.

ದೊಡ್ಡವನು + ಹುಡುಗ = ದೊಡ್ಡಹುಡುಗ

ಹಳೆಯದು + ಕನ್ನಡ = ಹಳೆಗನ್ನಡ

ಇನಿದು + ಮಾವು = ಇಮ್ಮಾವು

ಹಿರಿದು + ಬಾಗಿಲು = ಹೆಬ್ಬಾಗಿಲು

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಪೂರ್ವ ಪಧಾರ್ಥಪ್ರಧಾನ ಸಮಾಸಗಳು

**ಅಂಶಿ ಸಮಾಸ -** ವಸ್ತುವಿನ ಒಂದು ಭಾಗ ಅಥವಾ ಅಂಶವನ್ನು, ಇಡಿಯ ವಸ್ತು ಅಥವಾ ಅಂಶದೊಡನೆ ಸಂಬಂಧವನ್ನು ಸೂಚಿಸುವ ಸಮಾಸ. ಪೂರ್ವ ಪದದ ಅರ್ಥವೇ ಪ್ರಧಾನ.

ಕೈಯ + ಅಡಿ = ಅಂಗೈ

ಕೈಯ + ಮುಂದು = ಮುಂಗೈ

ತಲೆಯ + ಮುಂದೆ = ಮುಂದಲೆ

ಕಾಲು + ಮುಂದು = ಮುಂಗಾಲು/ ಮುಂಗಾಲ್

**ಕ್ರಿಯಾ ಸಮಾಸ** - ನಾಮಪದ ಮತ್ತು ಕ್ರಿಯಾಪದಗಳು ಸೇರಿ ಆಗುವ ಸಮಾಸ. ಪೂರ್ವ ಪದದ ಅರ್ಥ ಪ್ರಧಾನ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಮನೆಯನ್ನು + ಕಟ್ಟು = ಮನೆಕಟ್ಟು

ಕೈಯನ್ನು + ಕೊಡು = ಕೈಕೊಡು

ಕಣ್ಣನ್ನು + ತೆರೆ = ಕಣ್ದೆರೆ

## ಉಭಯ ಪದಾರ್ಥಪ್ರಧಾನ

**ದ್ವಂದ್ವ ಸಮಾಸ** - ಒಂದೇ ಬಗೆಯ ಹಲವು ನಾಮಪದಗಳು ಸೇರಿ ಆಗುವ ಸಮಾಸ. ಎಲ್ಲ ಪದಗಳ ಅರ್ಥವೂ ಮುಖ್ಯ. **ಎರಡು ಅಥವಾ ಅನೇಕ ನಾಮಪದಗಳು ಸೇರಿ ಎಲ್ಲ ಪದಗಳ ಅರ್ಥಗಳು ಪ್ರಧಾನವಾಗಿರುವದೇ ದ್ವಂದ್ವ ಸಮಾಸ.**

ಕಸವೂ + ಕಡ್ಡಿಯೂ = ಕಸಕಡ್ಡಿ ಅಥವಾ ಕಸಕಡ್ಡಿಗಳು

ಕೆರೆಯೂ + ಕಟ್ಟೆಯೂ + ಬಾವಿಯೂ = ಕೆರೆಕಟ್ಟೆಬಾವಿ ಅಥವಾ ಕೆರೆಕಟ್ಟೆಬಾವಿಗಳು

**ಬಹುವ್ರೀಹಿ ಸಮಾಸ** ಹಲವು ನಾಮಪದಗಳು ಸೇರಿ ಆಗುವ ಸಮಾಸ. **ಇಲ್ಲಿ ಬೇರೆ ಅರ್ಥವೇ ಮುಖ್ಯ**.

ಹಣೆಯಲ್ಲಿ + ಕಣ್ಣು ಉಳ್ಳವ = ಹಣೆಗಣ್ಣ (ಶಿವ)

ಮೂರು + ಕಣ್ಣು ಉಳ್ಳವ = ಮುಕ್ಕಣ್ಣ

ನಿಡಿದು + ಮೂಗು ಉಳ್ಳವ = ನಿಡುಮೂಗ

**ಅರಿ ಸಮಾಸ -** ಕನ್ನಡ ಮತ್ತು ಸಂಸ್ಕೃತ ಶಬ್ದಗಳು, ಕನ್ನಡ ಮತ್ತು ಅನ್ಯದೇಶ್ಯ ಶಬ್ದಗಳು ಸೇರಿ ಆಗುವದು ಅರಿಸಮಾಸ.

ಬಿರುದಾವಳಿ, ದಳಮುಖದವಳ, ರಾಯಕೋಲಾಹಲ, ದಳಮುಖಾದಿತ್ಯ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ